ಏಕೆಂದರೆ, ನಮಗೆ ಬಂದಿರತಕ್ಕ ಅಂಕಿಅಂಶಗಳ ಪ್ರಕಾರ ನಮಗೆ 100 ಕೋಟಿಗಿಂತಲೂ ಹೆಚ್ಚಿಗೆ ಇರತಕ್ಕ ಆದಾಯದಲ್ಲಿ ಕೇವಲ 16 ಲಕ್ಷ ರೂಪಾಯಿ ಮಾತ್ರ ಈ ಬಾಬಿನಿಂದ ಬರುತ್ತಿದೆ. ಇದಕ್ಕಾಗಿ ಬೆಂಗಳೂರು ನಗರದ ಸೌಂದರ್ಯವನ್ನು, ಬೆಂಗಳೂರು ನಾಗರೀಕರ ರಕ್ಷಣೆಯನ್ನು ನಾವು ಕೈ ಬಿಡುತ್ತಿದ್ದೇವೆ. ನನ್ನ ಅಭಿಪ್ರಾಯದಲ್ಲಿ ಪೋರ್ಡಿಂಗ್ಸ್ ಲೀಸ್ ಅಮೌಂಟ್ ನಮಗೆ ಬೇಡ, ಜಾಹಿರಾತಿನ ಹಣ ಕೂಡ ನಮಗೆ ಬೇಡ. ಇದನ್ನೆಲ್ಲಾ ಬಿಟ್ಟರೆ ಬೆಂಗಳೂರು ನಗರದಾದ್ಯಂತ ಸಂಚಾರದಲ್ಲಿ ಶಾಂತಿಯುತ ವಾತಾವರಣ ಉಂಟಾಗುತ್ತದೆಂದು ನಾನು ಹೇಳಬಯಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್:- ಈಗಾಗಲೇ ಅದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಎಲ್ಲೆಲ್ಲಿ ಈ ರೀತಿ ಟ್ರಾಫಿಕ್ ಪೆಡೆಸ್ಟ್ರಿಯನ್ ಮತ್ತು ಟ್ರಾಫಿಕ್‌ಗೆ ಅಡಚಣೆ ಬರುತ್ತದೆ ಅಂಥ ಕಡೆ ಟ್ರಾಫಿಕ್ ಪೋಲೀಸರನ್ನು ಕೇಳಿ ಅವರಿಂದ ಅನುಮತಿಯನ್ನು ತೆಗೆದುಕೊಂಡೇ ಇನ್ನು ಮುಂದೆ ಹೋರ್ಡಿಂಗ್ಸ್ ಹಾಕಿಸುತ್ತೇವೆ. ಇನ್ನು ಸೌಂದರ್ಯದ ವಿಚಾರದಲ್ಲಿ ಕೂಡ ಅರ್ಬನ್ ಆರ್ಟ್ಸ್ ಕಮೀಷನರ್‌ರವರ ಅಭಿಪ್ರಾಯವನ್ನು ತೆಗೆದುಕೊಂಡು ಹೋರ್ಡಿಂಗ್ಸ್‌ನ್ನು ಹಾಕಿಕೊಳ್ಳುವುದಕ್ಕೆ ಅನುಮತಿ ಕೊಡುತ್ತೇವೆ.

ಕುಂದಗೋಳ ನಗರಕ್ಕೆ ಕುಡಿಯುವ ನೀರಿನ ಸರಬರಾಜು.

108 (110) ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ್ (ಕುಂದಗೋಳ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕುಂದಗೋಳ ನಗರದ ಜನತೆಗೆ ಕುಡಿಯುವ ನೀರಿನ ಸರಬರಾಜನ್ನು ಎಷ್ಟು ದಿವಸಗಳಲ್ಲಿ ಒದಗಿಸಲಾಗುವುದು?
2. ಈ ನೀರು ಸರಬರಾಜು ಕೆಲಸ ಯಾವ ಹಂತದಲ್ಲಿ ಇದೆ?
3. ಅದನ್ನು ಬೇಗ ಮುಗಿಸುವ ವಿಚಾರ ಸರ್ಕಾರಕ್ಕೆ ಇದೆಯೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

1. ಮಾರ್ಚ್ 1992 ಅಂತ್ಯದೊಳಗೆ
2. ಎಲ್ಲಾ ಕಾಮಗಾರಿಗಳು ಮುಗಿಯುವ ಹಂತದಲ್ಲಿವೆ.
3. ಹೌದು - ಮಾರ್ಚ್ 1992ಕ್ಕೆ

ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ್:- ಸ್ವಾಮಿ, ಕುಂದಗೋಳ ನಗರವು ಕುಡಿಯುವ ನೀರಿನ ಸಮಸ್ಯೆಯನ್ನು ಬಹಳ ದಿವಸದಿಂದ ಎದುರಿಸುತ್ತಿದೆ. ಆದರೆ ತಮ್ಮ ಉತ್ತರದಲ್ಲಿ ಮಾರ್ಚಿ ಅಂತ್ಯದೊಳಗೆ ಈ ಕೆಲಸವನ್ನು ಮಾಡಿ ಕೊಡುತ್ತೇವೆಂದು ಹೇಳಿದ್ದೀರಿ. ಬಹುಶಃ ಅಷ್ಟರೊಳಗೆ ಈ ಕೆಲಸ ಮುಗಿಯುವುದಿಲ್ಲ. ಆದುದರಿಂದ ಪುನಃ ಅವರನ್ನು ಕರೆಸಿ ಮಾರ್ಚಿಯೊಳಗೆ ಕುಡಿಯುವ ನೀರನ್ನು ಸರಬರಾಜು ಮಾಡುತ್ತೇವೆಂದು ಹೇಳುತ್ತಿದ್ದೀರಿ. ತಾವು ಮಾರ್ಚಿ ಅಂತ್ಯದೊಳಗೆ ಕುಡಿಯುವ ನೀರನ್ನೊದಗಿಸಿದರೆ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್:- ನಿನ್ನೆ ತಾನೆ ನಮ್ಮ ಛೇರ್ಮನ್ ಮತ್ತು ಎಂ.ಡಿ. ಯವರು ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದಾರೆ. ಈ ತಿಂಗಳ ಅಂತ್ಯದೊಳಗೆ ಇದನ್ನು ಪ್ರಾರಂಭ ಮಾಡುತ್ತೇವೆ.

ರಾಜ್ಯದಲ್ಲಿರುವ ರಾಸಾಯನಿಕ ಘಟಕಗಳ ಸಂಖ್ಯೆ

109 (791) ಶ್ರೀ ಎಸ್. ಜಯಣ್ಣ (ಚಳ್ಳಕೆರೆ):- ಮಾನ್ಯ ಗೃಹ ಹಾಗೂ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?